**ಮೂಲ ದಾವಾ ನಂಃ 4/2025**

**ಡಿ. ಡಬ್ಲ್ಯು. 1**

**(ಇಂದು ದಿನಾಂಕಃ 06-03-2026 ರಂದು ಡಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ  ಆರ್ ವಿ ಬಿ ರವರಿಂದಃ**

ಪ್ರಭಾಕರ ಬಾಲಕೃಷ್ಣ ನಾಯ್ಕ ಇವರು ನನ್ನ ತಂದೆಯವರು ಎಂದರೆ ಸರಿ. ಸದ್ರಿ ಪ್ರಭಾಕರ ಬಾಲಕೃಷ್ಣ ನಾಯ್ಕ ಇವರ ಮೊದಲನೆಯ ಹೆಂಡತಿ ಶ್ರೀಮತಿ ಜ್ಯೋತಿ ಪ್ರಭಾಕರ ನಾಯ್ಕ ಎಂದರೆ ಸರಿ. ನಾನು ಹಾಗೂ  2 ನೇ ಪ್ರತಿವಾದಿ ಶ್ರೀ ಪ್ರಭಾಕರ ಬಾಲಕೃಷ್ಣ ನಾಯ್ಕ ಮತ್ತು  ಶ್ರೀಮತಿ ಜ್ಯೋತಿ ಪ್ರಭಾಕರ ನಾಯ್ಕ ಇವರ ಮಕ್ಕಳು ಎಂದರೆ ಸರಿ. ಶ್ರೀಮತಿ ಜ್ಯೋತಿ ಪ್ರಭಾಕರ ನಾಯ್ಕ ಇವರು ತೀರಿಕೊಂಡ ನಂತರ ಸದ್ರಿ  ಪ್ರಭಾಕರ ನಾಯ್ಕರವರು ಈ ದಾವೆಯ ವಾದಿ ಶ್ರೀಮತಿ  ಸೀಮಾ ರವರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ಪ್ರಭಾಕರ ಬಾಲಕೃಷ್ಣ ನಾಯ್ಕರವರು ದಿನಾಂಕ 13-02-2013 ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ಅವರು ಮೃತ ಪಟ್ಟಾಗ ಅವರ ವಾರಸುದಾರರು ಎಂದರೆ ಈ ದಾವೆಯ ವಾದಿ ಹಾಗೂ ಪ್ರತಿವಾದಿಯಾದ ನಾವುಗಳು ಎಂದರೆ ಸರಿ.

2. ನಾನು ಈ ಹಿಂದೆ ಕಾರವಾರದ ಮಾನ್ಯ ಸಿವಿಲ್ ಜಡ್ಜರ ನ್ಯಾಯಾಲಯದಲ್ಲಿ ಓ.ಎಸ್. ನಂಬ್ರ 86/2013 ರ ದಾವೆ ಸಲ್ಲಿಸಿ ಸದ್ರಿ ಪ್ರಭಾಕರ ಬಾಲಕೃಷ್ಣ ನಾಯ್ಕರವರಿಗೆ ಈ ದಾವೆಯ ವಾದಿ ,ಹಾಗೂ ಪ್ರತಿವಾದಿಯರಾದ ನಾವುಗಳು ಅವರ ಏಕಮಾತ್ರ ವಾರಸುದಾರರು ಅಂತಾ ಘೋಷಣೆ ಕೋರಿ ದಾವೆ ಸಲ್ಲಿಸಿ ಡಿಕ್ರಿ ಪಡೆದುಕೊಂಡಿರುತ್ತೇವೆ ಎಂದರೆ ಸರಿ.

3. ಮೃತ  ಪ್ರಭಾಕರ ಬಾಲಕೃಷ್ಣ ನಾಯ್ಕರವರು ಬಿಟ್ಟು ಹೋದ ಎಲ್ಲಾ ಸ್ಥಿರ ಮತ್ತು ಚರಾಸ್ತಿಗಳ ಮೇಲೆ ಈ ದಾವೆಯ ವಾದಿಗೆ  1/3 ಅಂಶ ಹಕ್ಕು ಇದೆ ಎಂದರೆ ಸರಿ.

4. ಈ ದಾವೆಯ ಸಮನ್ಸಿನೊಂದಿಗೆ ಬಂದಿರುವ ದಾವಾ ಪತ್ರದ ಪ್ರತಿಯನ್ನು ನಾನು ಓದಿ ತಿಳಿದುಕೊಂಡಿದ್ದು ದಾವೆಯಲ್ಲಿ ಏನೆಲ್ಲಾ ಹೇಳಲಾಗಿದೆ ಎಂಬುದು ನನಗೆ ಗೊತ್ತಿದೆ.

5. ದಾವಾ ಶೆಡ್ಯೂಲ್ ನಲ್ಲಿ ಕಾಣಿಸಿರುವ ಎಲ್ಲಾ ಸ್ಥಿರ ಹಾಗೂ ಚರಾಸ್ಥಿಗಳು ಮೃತ ಪ್ರಭಾಕರ ಬಾಲಕೃಷ್ಣ ನಾಯ್ಕರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿ.

6. ಆದ್ದರಿಂದ ಈ ಆಸ್ತಿಗಳಲ್ಲಿ ಈ ದಾವೆಯ ವಾದಿಗೆ 1/3 ಅಂಶ ಹಕ್ಕು ಬರುತ್ತದೆ ಎಂದರೆ ಸರಿ.

7. ನಾನು ಎಂ.ಬಿ.ಎ ಪದವೀದರನಾಗಿರುತ್ತೇನೆ. ಈಗ ನಾನು ವ್ಯವಹಾರ ಮಾಡುತ್ತೇನೆ. ನಾನು ಈಗ ಒಂದು ಜಿಮ್ ಸೆಂಟರ್ ನಡೆಸುತ್ತಿದ್ದೇನೆ . ಅದಲ್ಲದೇ ನಾನು ಆಂಶಕಾಲಿಕವಾಗಿ ಮೀನು ವ್ಯಾಪಾರ ಸಹ ಮಾಡುತ್ತೇನೆ. ಅದಲ್ಲದೇ ನನ್ನ ಬಳಿ ಒಂದು ಪ್ರಗತಿ ಐಸ್ ಎಂಡ್ ಕೋಲ್ಡ್ ಸ್ಟೋರೇಜ್ ಸಹ ಇದೆ ಎಂದರೆ ಸಾಕ್ಷಿ ಅದು ನನ್ನ ತಂದೆಯವರದ್ದಾಗಿದ್ದು ಈಗ ಬಂದ್ ಆಗಿದೆ ಅಂತಾ ಉತ್ತರಿಸುತ್ತಾರೆ. ಅದೇ ರೀತಿ ನಿಮ್ಮದು ಒಂದು ಗಣೇಶ್ ವುಡ್ ಇಂಡಸ್ಟ್ರೀಸ್ ಸಹ ಇದೆ ಎಂದರೆ ಸಾಕ್ಷಿ ಅದರ ಲೈಸನ್ಸ ನನ್ನ ಹೆಸರಿನಲ್ಲಿದ್ದು ಅದಕ್ಕೆ ಸಂಬಂಧಪಟ್ಟಂತೆ ವ್ಯವಹಾರ ಇರುವುದಿಲ್ಲ ಅಂತಾ ಉತ್ತರಿಸುತ್ತಾರೆ. ಅದೇ ರೀತಿ ಗಿರಿ ಫಿಶ್ ಕ್ಯಾನಿಂಗ್ ಬ್ಯುಸಿನೆಸ್ ಇದೆ ಎಂದರೆ ಸಾಕ್ಷಿ ಅದು ನನ್ನ ತಂದೆಯವರ ವ್ಯವಾಹರವಾಗಿದ್ದು ಈಗ ಬಂದ್ ಆಗಿದೆ ಅಂತಾ ಉತ್ತರಿಸುತ್ತಾರೆ.

8. ನನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಆದಾಯ ತೆರಿಗೆ ಪಾವತಿಸುತ್ತಿದೇನೆ ಎಂದರೆ ನಾನು 2019 ರ ತನಕ ಆದಾಯ ತೆರಿಗೆ ಪಾವತಿಸಿದ್ದೆ ಅಂತಾ ಉತ್ತರಿಸುತ್ತಾರೆ.

9. ಮೇಲೆ ಹೇಳಿರುವ ದಾವಾ 'ಬಿ' ಶೆಡ್ಯೂಲಿನಲ್ಲಿ ಕಾಣಿಸಿರುವ ಎಲ್ಲಾ ವ್ಯವಹಾರಗಳು ನನ್ನ ತಂದೆ ಜೀವಂತ ಇದ್ದಾಗ ನಡೆಸುತ್ತಿದ್ದ ವ್ಯವಹಾರಗಳು ಎಂದರೆ ಸರಿ. ನಿಮ್ಮ ತಂದೆ ತೀರಿಕೊಂಡ ನಂತರ ಅವರು ನಡೆಸುತ್ತಿದ್ದ ಎಲ್ಲಾ ವ್ಯವಹಾರಗಳನ್ನು ಮುಂದುವರಿಸಿಕೊಂಡು ಹೋಗಬೇಕು ಎಂಬ ಉದ್ದೇಶದಿಂದಲೇ ನೀವು ಊರಿಗೆ ಬಂದು ನೆಲೆಸಿರುವುದು ಎಂದರೆ ಸರಿ. ಆ ಪ್ರಕಾರ ನಿಮ್ಮ ತಂದೆ ತೀರಿಕೊಂಡ ನಂತರ ಆ ಎಲ್ಲಾ ವ್ಯವಹಾರಗಳನ್ನು ನೀವು ಮುಂದುವರಿಸಿಕೊಂಡು ಹೋಗಿರುತ್ತೀರಿ ಎಂದರೆ ಸರಿಯಲ್ಲ. ಸದ್ರಿ ವ್ಯವಹಾರಗಳನ್ನು ನೀವು ಎಲ್ಲಿಯವರೆಗೆ ನಡೆಸಿಕೊಂಡು ಬಂದಿರುತ್ತೀರಿ ಎಂದರೆ ಸಾಕ್ಷಿ 2014 ರವರೆಗೆ ನಡೆಸಿಕೊಂಡು ಬಂದಿರುತ್ತೇನೆ ಅಂತಾ ಉತ್ತರಿಸುತ್ತಾರೆ. ಯಾವುದೇ ಚಾಲ್ತಿಯಲ್ಲಿರುವ ವ್ಯವಹಾರವನ್ನು ಮುಚ್ಚಬೇಕಾದರೆ ಅದಕ್ಕೊಂದು ಪ್ರಕ್ರಿಯೆಗಳು ಇರುತ್ತವೆ ಎಂದರೆ ಸರಿ. ವುಡ್ ಇಂಡಸ್ಟ್ರೀ , ಐಸ್ ಸ್ಟೋರೇಜ್

ಹಾಗೂ ಫಿಶ್ ಕ್ಯಾನಿಂಗ್ ವ್ಯವಹಾರವನ್ನು ನಡೆಸಲು ಸಂಬಂಧಪಟ್ಟ ಇಲಾಖೆಯಿಂದ ಪರವಾನಿಗೆಯನ್ನು ಪಡೆದುಕೊಳ್ಳಬೇಕು ಎಂದರೆ ಸಾಕ್ಷಿ ವುಡ್ ಇಂಡಸ್ಟ್ರೀ ನಡೆಸಲು ಮಾತ್ರ ಪರವಾನಿಗೆ ಬೇಕಾಗಿದ್ದು , ಉಳಿದ 2 ವ್ಯವಹಾರಗಳಿಗೆ ಪರವಾನಿಗೆ ಬೇಕಿಲ್ಲ ಅಂತಾ ಉತ್ತರಿಸುತ್ತಾರೆ. ವುಡ್ ಇಂಡಸ್ಟ್ರೀಯ ಅಂದರೆ ದಾವಾ 'ಬಿ' ಶೆಡ್ಯೂಲ್ ಐಟಂ ನಂಬ್ರ 1ರ ಇಂಡಸ್ಟ್ರಿಯ ಪರವಾನಿಗೆ ನನ್ನ ಹೆಸರಿನಲ್ಲೇ ಇದೆ ಎಂದರೆ ಸರಿ.

10. ನನ್ನ ತಂದೆ ತೀರಿಕೊಂಡ ನಂತರ ಸದ್ರಿ ದಾವಾ ಐಟಂ ನಂಬ್ರ 1ರ ವ್ಯವಹಾರಕ್ಕೆ ಸಂಬಂಧಿಸಿದಂತೆ ಎಷ್ಟು ವ್ಯಾಪಾರ ವಹಿವಾಟುಗಳನ್ನು ಮಾಡಿದ್ದೆ ಅಂತಾ ತೋರಿಸಲು ಲೆಕ್ಕ ಪತ್ರಗಳನ್ನು ಈ ದಾವೆಯಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸದ್ರಿ ವ್ಯವಹಾರವು ಇಲ್ಲಿಯವರೆಗೆ ನೀವೇ ನಡೆಸಿಕೊಂಡು ಬಂದಿರುತ್ತೀರಿ ಎಂದರೆ ಸರಿಯಲ್ಲ.

11. ದಾವಾ 'ಬಿ' ಶೆಡ್ಯೂಲ್ ಐಟಂ ನಂಬ್ರ 2 ಮತ್ತು 3ರ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಹೇಳಿದಂತೆ 2014 ರವರೆಗೆ ನಾನು ಮಾಡಿರುವ ವ್ಯಾಪಾರ ವಹಿವಾಟುಗಳ ಬಗ್ಗೆ ಲೆಕ್ಕ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ನಾನು ವ್ಯವಹಾರವನ್ನು ಮಾಡದೇ ಇರುವ ಕಾರಣ ಲೆಕ್ಕ ಪತ್ರವನ್ನುಹೇಗೆ ಹಾಜರುಪಡಿಸುವುದು ಅಂತಾ ಉತ್ತರಿಸುತ್ತಾರೆ. ಸದ್ರಿ ವ್ಯವಹಾರಗಳನ್ನು ನಾನು ಇಲ್ಲಿಯವರೆಗೆ ನಡೆಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾ'ಬಿ' ಶೆಡ್ಯೂಲ್ ವ್ಯವಹಾರಗಳಲ್ಲಿನ ಲಾಭಾಂಶದಲ್ಲಿ ವಾದಿಗೆ ಪಾಲು ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನಾನು ವ್ಯವಹಾರ ನಡೆಸಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಶಾಂತಿಕಾ ಸೌಹಾರ್ದ ಕೋ ಅಪರೇಟಿವ್ ಸೊಸೈಟಿ, ಅಂಕೋಲಾ ಇದರಲ್ಲಿ ನನ್ನ ತಂದೆ ಮಾಡಿದ್ದ ಸಾಲವನ್ನು ಚಿತ್ತಾಕುಲ ಗ್ರಾಮದ ಸರ್ವೆ ನಂಬ್ರ 795/1 , 17 ಗುಂಟೆ 11 ಆಣೆ ಜಮೀನನ್ನು ಮಾರಾಟ ಮಾಡಿ ಸದ್ರಿ ಸಾಲವನ್ನು ತೀರಿಸಲಾಗಿದೆ ಎಂದರೆ ಸರಿ. ಸದ್ರಿ ಆಸ್ತಿಯನ್ನು ಈ ದಾವೆಯಲ್ಲಿ ದಾವಾ ಆಸ್ತಿಯನ್ನಾಗಿ ಕಾಣಿಸಿಲ್ಲ ಎಂದರೆ ಸರಿ. ಸದ್ರಿ ಆಸ್ತಿ ಬಹಿರಂಗವಾಗಿ ನಾರಾಯಣ ಕಾಶೀನಾಥ ನಾಯ್ಕರವರಿಗೆ ಹರಾಜು ಆಗುವ ಸಮಯದಲ್ಲಿ ನಾನು ಇದ್ದೆ. ಸದ್ರಿ ನಾರಾಯಣ ಕಾಶೀನಾಥ ನಾಯ್ಕರವರು ಆಸ್ತಿಯ ಮಾರುಕಟ್ಟೆಯ ಮೌಲ್ಯಕ್ಕಿಂತ ಕಡಿಮೆ ಬೆಲೆಗೆ ಹರಾಜಿನಲ್ಲಿ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾರಾಯಣ ಕಾಶೀನಾಥ ನಾಯ್ಕರವರು ಉಳಿದ ಹಣವನ್ನು ನಿಮಗೆ

**ಮೂಲ ದಾವಾ ನಂಃ 4/2025**

**ಡಿ. ಡಬ್ಲ್ಯು. 1**

ಕೊಟ್ಟಿದ್ದಾರೆ ಎಂದರೆ ಸುಳ್ಳು. ವಾದಿಯರ ಹಕ್ಕಿಗೆ ಚ್ಯುತಿ ತರುವ ಉದ್ದೇಶದಿಂದ ನಾನು ನಾರಾಯಣ ಕಾಶೀನಾಥ ನಾಯ್ಕುರವರೊಂದಿಗೆ ಶಾಮೀಲಾಗಿ ಆಸ್ತಿಯನ್ನು ಕಡಿಮೆ ಮೌಲ್ಯಕ್ಕೆ ಹರಾಜು ಮಾಡಿಸಿ ಉಳಿದ ಹಣವನ್ನು ನಾನೇ ತೆಗೆದುಕೊಂಡು ವಾದಿಗೆ ಮೋಸ ಮಾಡಿರುತ್ತೇನೆ ಎಂದರೆ ಸುಳ್ಳು.

**ಈ ಹಂತದಲ್ಲಿ ಮುಂದುವರಿದ ಪಾಟೀ ಸಮಯಾವಕಾಶ ನೀಡಿ ಮುಂದೂಡಲಾಗಿದೆ .**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಕಾರವಾರ.**